ಮೂಲ ದಾವಾ ಸಂಖ್ಯೆ. 37/23 ಡಿ ಡಬ್ಲ್ಯೂ 1

(ದಿನಾಂಕ 05-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಸಿ ಎಸ್ ಕೆ ವಕೀಲರಿಂದಃ-

ನಾನು 6 ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ನಾನು ಬನ್ನಿಕಲ್ಲು ಗ್ರಾಮದಲ್ಲಿ ವಾಸವಾಗಿರುತ್ತೇನೆ. ದಾವಾ ಜಮೀನು ಮೂಲತಹ ಡೈಗ್ಲಾಟ ಪ್ರಕಾರ ಎಷ್ಟು ವಿಸ್ತೀರ್ಣ ಇತ್ತು ಎನ್ನುವದು ನನಗೆ ಗೊತ್ತಿಲ್ಲ. ಡೈಗ್ಲಾಟನಲ್ಲಿದ್ದ ಪ್ರಕಾರ ಯಾರು ಯಾರಿಗೆ ಎಷ್ಟು ಎಷ್ಟು ಕ್ಷೇತ್ರ ವಿಭಾಗ ಆಯಿತು ಎನ್ನುವುದು ನನಗೆ ಗೊತ್ತಿಲ್ಲ. ಡೈಗ್ಲಾಟ ಪ್ರಕಾರ ಸರ್ವೆ ನಂ 89/ ಎ ಒಟ್ಟು 8.80 ಎಕರೆ ಜಮೀನು ಇರುತ್ತದೆ ಎಂದರೆ ಇರಬಹುದು. ಸಣ್ಣ ಹನುಮಂತಪ್ಪ ಅಲಿಯಾಸ್ ಬಾಲಪ್ಪ ಇವರು ಸೀತವ್ವ ಇವರ ತಂದೆ ಅಂದರೆ ಇರಬಹುದು. ಸದರಿ ಸರ್ವೆ ನಂ 89/ಎ ಜಮೀನಲ್ಲಿ 3.80 ಎಕರಿ ಜಮೀನನ್ನು ಸೀತವ್ವ ಇವರ ತಂದೆ ಬಾತಪ್ಪ ಇವರು ಸೀತವ್ವ ಇವರಿಗೆ 4.11.1954 ರ ನೋಂದಾಯಿತ ದಾನ ಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಭೂಮಿ ಕೊಟ್ಟಿರುತ್ತಾರೆ ಅನ್ನುವ ವಿಚಾರ ನನಗೆ ಗೊತ್ತು ಆದರೆ ಎಷ್ಟು ಎಕರೆ ಅನ್ನು ವುದು ನನಗೆ ಗೊತ್ತಿಲ್ಲ ಅನ್ನುತ್ತಾರೆ. ಸದರಿ ಸರ್ವೆ ನಂಬರಿನಲ್ಲಿ 3 ಎಕರೆ ಜಮೀನನ್ನು ಕೊಪ್ಪಿ ಪುರುಷೊತ್ತಮ ಇವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸೀತವ್ವ ಇವರಿಗೆ ದಾನ ಪತ್ರ ಆದ ಸಮಯದಲ್ಲಿ ನಾನು ಜನಿಸಿರಲಿಲ್ಲ. ಆಗ ನನ್ನ ತಂದೆಯ ವಯಸ್ಸು ಸುಮಾರು 8-10 ವರ್ಷ ಇರಬಹುದು. ಜಮೀನು ಖರೀದಿಸುವ ಸಮಯದಲ್ಲಿ ಸದರಿ ದಾನ ಪತ್ರದ ವಿಚಾರ ನಿಮ್ಮ ತಂದೆಯವರಿಗೆ ಗೊತ್ತಿತ್ತ ಅಥವಾ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಸನ್ 1954 ರ ದಾನ ಪತ್ರದ ಬಗ್ಗೆ ಇಸಿಯಲ್ಲಿ ಸಹ ನಮೂದಾಗಿತ್ತು ಎಂದರೆ ನನಗೆ ಗೊತ್ತಿಲ್ಲ._ ಸನ್ 2005 ರಲ್ಲಿ ನಮ್ಮ ತಂದೆಯವರು ಜಮೀನನ್ನು ಖರೀದಿಸುವ ಸಂದರ್ಬದಲ್ಲಿ 11 ಇ ನಕಾಶೆಯನ್ನು ಮಾಡಿಸಿದ್ದಾರ ಇಲ್ಲ ಎನ್ನುವುದು ನನಗೆ ಗೊತ್ತಿಲ್ಲ. ನನ್ನ ತಂದೆಯವರು ಜಮೀನನ್ನು ಚಿಕ್ಕಣ್ಣನವರ ಹೊನ್ನಮ್ಮ ಇವರಿಂದ ಖರೀದಿಸಿರುತ್ತಾರೆ. ನನ್ನ ತಂದೆಯವರು 2.80 ಎಕರೆ ಜಮೀನನ್ನು ಖರೀದಿಸಿರುತ್ತಾರೆ. ಈಗಲೂ ಸಹ ನಾವು 2.80 ಎಕರೆ ಜಮೀನನ್ನು ಉಳುಮೆ ಮಾಡುತ್ತಿದ್ದೇವೆ. ನಾನು ನಮ್ಮ ತಂದೆಯವರ ಕಾಲದಿಂದಲೂ ಸ್ವಾದೀನದಲ್ಲಿರುತೇನೆ. ಸದರಿ ಜಮೀನಿನ ಬಗ್ಗೆ ನಿಮ್ಮ ತಂದೆಯವರು ಅಥವಾ ನೀವು ಏನಾದರೂ ಸರ್ವೆ ಮಾಡಿಸಿದೀರಾ ಎಂದರೆ ನಾನು ಸರ್ವೆ ಮಾಡಿಸಿದ್ದೇನೆ ಎನ್ನುತ್ತಾರೆ. ಸನ್ 2011-12 ರಲ್ಲಿ ನಾನು ಸದರಿ ಜಮೀನ ಸರ್ವೆ ಮಾಡಿಸಿರುತ್ತೇನೆ. ಸದರಿ ಸರ್ವೆ ಮಾಡಿಸಿದ ಬಗ್ಗೆ ಸರ್ವೆ ಸ್ಕೆಚ್ ಅನ್ನು ಕೋರ್ಟ ಗೇನಾದರೂ ಹಾಜರುಪಡಿಸಿದೀರಾ ಎಂದರೆ ಹಾಜರುಪಡಿಸಿದ್ದೇನೆ

ಎನ್ನುತ್ತಾರೆ. ಆ ರೀತಿ ನಾನು ಯಾವುದೇ ನಕಾಶೆ ಹಾಜರುಪಡಿಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮತ್ತು ವಾದಿಯರ ಜಮೀನ ನಡುವೆ ಕೃಷಿ ಹೊಂಡ ಇದೆ ಎಂದರೆ ಸಾಕ್ಷಿಯು ವಾದಿಯರ ಜಮೀನಲ್ಲಿದೆ ನಮ್ಮ ಜಮೀನಲ್ಲಿ ಇಲ್ಲ ಎನ್ನುತ್ತಾರೆ. ಸದರಿ ಕೃಷಿ ಹೊಂಡ ವಾದಿಯ ಜಮೀನಲ್ಲಿ ಬರುತ್ತದೆ. ಸೀತಮ್ಮ ಇವರಿಗೆ ದಾನ ಪತ್ರ ಆದ ನಂತರ 88 ಸೆಂಟ್ಸ ಜಮೀನು ಅವರ ಹೆಸರಿಗೆ ಖಾತೆ ಆಗಿಲ್ಲ ಅಂತಾ ಅವರು ತಹಶೀಲ್ದಾರ ಇವರಿಗೆ ಅರ್ಜಿ ನೀಡಿದ್ದರು ಈ ವಿಚಾರ ನಿಮಗೆ ಗೊತ್ತ ಎಂದರೆ ಇಲ್ಲ. ತಹಶೀಲ್ದಾರ ನ್ಯಾಯಾಲಯದಲ್ಲಿ ಪ್ರಕರಣ ನಡೆದಾಗ ನನಗೆ ನೊಟೀಸು ಬಂದಿತ್ತು ಎಂದರೆ ಇಲ್ಲ. ತಹಶೀಲ್ದಾರ ನ್ಯಾಯಾಲಯದ ಆದೇಶದ ವಿರುದ್ಧ ಜಿಲ್ಲಾದಿಕಾರಿ ನ್ಯಾಯಾಲಯದಲ್ಲಿ ಮೇಲ್ಮನವಿ ದಾಖಲಾಗಿತ್ತು ಅದರಲ್ಲಿ ನನಗೆ ನೋಟೀಸು ಬಂದಿತ್ತು ಎಂದರೆ ಸಾಕ್ಷಿಯು ಎಸಿ ಮತ್ತು ಡಿಸಿ ನ್ಯಾಯಾಲಯದ ನೋಟೀಸುಗಳು ನನಗೆ ಬಂದಿರುತ್ತವೆ ಎನ್ನುತ್ತಾರೆ. ಸದರಿ ಮೇಲ್ಮನವಿಯಲ್ಲಿ ನಾನು ಹಾಜರಾಗಿ ತಕರಾರು ಸಹ ಸಲ್ಲಿಸಿದ್ದೇ ಎಂದರೆ ಸರಿ. ನಾನು 2 ಎಕರೆ ಜಮೀನಲ್ಲಿ ಮಾತ್ರ ಸ್ವಾದೀನದಲ್ಲಿದ್ದೆ ಎಂದರೆ ಸರಿಯಲ್ಲ. ಸನ್ 1954 ರಿಂದ ವಾದಿಯರು 3.80 ಎಕರೆ ಜಮೀನಿನ ಸ್ವಾದೀನದಲ್ಲಿರುತ್ತಾರೆ ಎಂದರೆ ಸಾಕ್ಷಿಯು 7-8 ವರ್ಷದಿಂದ ವಾದಿಯರ ಸ್ವಾದೀನದಲ್ಲಿ ಜಮೀನು ಇದ್ದ ಬಗ್ಗೆ ನನಗೆ ಮಾಹಿತಿ ಇದೆ ಅದಕ್ಕಿಂತ ಪೂರ್ವದಲ್ಲಿ ಸದರಿ ಜಮೀನು ಬೀಳು ಬಿದ್ದಿತ್ತು ಎನುತ್ತಾರೆ. ಸದರಿ 80.ಸೆಂಟ್ಸ ಜಮೀನಿನ ವಿಚಾರವಾಗಿ ನ್ಯಾಯಾಲಯದಿಂದ ಸರ್ವೆ ಮಾಡಿಸಲು ನನಗೆ ಯಾವುದೇ ತಕರಾರು ಇಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟಿಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ